## ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯಮಂತ್ರಿಗಳ ಹೆಸರಿನ ಮುಂದೆ ನಮೂದಿಸಿರುವ ಈ ಎರಡು ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧) ೧೯೬೪ನೇ ಇಸವಿಯ ಕರ್ನಾಟಕ ಚಲನಚಿತ್ರ (ನಿಯಂತ್ರಣ) ಅಧಿಶಾಸನದ ೨೨ನೇ ಕಲಂಮಿನ ಮೇರೆಗೆ :

ಬೆಳಗಾವಿಯಲ್ಲಿರುವ ಮರಾಠ ಸೈನಿಕ ಕೇಂದ್ರದ ಕಮಾಂಡೆಂಟ್‌ರವರು ಪ್ರದರ್ಶಿಸಲಿರುವ ಚಲನಚಿತ್ರಕ್ಕೆ ವಿನಾಯಿತಿ ನೀಡುವ ಬಗ್ಗೆ ದಿನಾಂಕ ೧೦ನೇ ಡಿಸೆಂಬರ್ ೧೯೮೬ ರಂದು ಹೆಚ್.ಡಿ. ೩೦೧ ಸಿ.ಎನ್.ಎ ೮೬ನೇ ಕ್ರಮಾಂಕದಲ್ಲಿ ಹೊರಡಿಸಲಾದ ಆದೇಶ.

೨) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ :

ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರ ೧೯೮೧-೮೨ ಹಾಗೂ ೧೯೮೨-೮೩ನೇ ಸಾಲುಗಳ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಇಡುತ್ತೇನೆ.

ಸನ್ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳ ಹೆಸರಿನ ಮುಂದೆ ಇರುವ ಈ ಕೆಳಗೆ ನಮೂದಿಸಿರುವ ಕಾಗದ ಪತ್ರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

೧೯೫೫ನೇ ಸಾಲಿನ ಹತ್ತಿ ಸಾಗಾಣಿಕೆ ಶಾಸನದ ೮ನೇ ಕಲಮಿನ ಮೇರೆಗೆ ನಿರ್ದಿಷ್ಟಪಡಿಸಲಾದ ತರಹದ ಹತ್ತಿಯನ್ನು ರಕ್ಷಿತ ಪ್ರದೇಶದೊಳಗೆ ಆಮದು ಮಾಡಿಕೊಳ್ಳುವುದನ್ನು ನಿಷೇಧಿಸುವುದರ ಬಗ್ಗೆ ಹೊರಡಿಸಲಾದ ಎಪಿಹೆಚ್ ೫೦೪ ಎಎಂಎಸ್ ೮೪ ಕ್ರಮಾಂಕದ ಕರಡು ಅಧಿಸೂಚನೆಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಗಿದೆ. ಈಗ ಗಮನಸೆಳೆಯುವ ಸೂಚನೆಗಳು.

## ಗಮನ ಸೆಳೆಯುವ ಸೂಚನೆ

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಬಗ್ಗೆ ಶ್ರೀ ವೇದಾಂತ ಹೆಬ್ಬಿಗೆ ನಿಯಮ ೨೪೮ ಪ್ರಕಾರ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.**

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—ನಾನು ಈ ಕೆಳಗಿನ ಹೇಳಿಕೆಯನ್ನು ಮಾಡಬಯಸುತ್ತೇನೆ.

ದಿನಕೂಲಿ ನೌಕರರಿಗೆ ಅವರ ಸೇವೆಯನ್ನು ಪರಿಗಣಿಸಿ ನಿಯಮಗಳ ಪ್ರಕಾರ ನಿಯಮಿಸಲ್ಪಟ್ಟು ಪ್ರಸ್ತುತ ಕೆಲಸ ಮಾಡುತ್ತಿರುವ ನೌಕರರಿಗೆ ಸಿಗುವ ವೇತನ ಶ್ರೇಣಿ ಮತ್ತು ಇತರ ಭತ್ಯೆಗಳನ್ನು ನೀಡುವಂತೆ ಸರ್ಕಾರಿ ಆದೇಶವನ್ನು ದಿನಾಂಕ ೩೦-೧೧-೮೬ ರಂದು ಎಲ್ಲಾ ಪುರಸಭೆಗಳು, ನಗರ ಸಭೆಗಳು, ಮಂಡಲಿಗಳು, ನಿಗಮಗಳಿಗೆ ಅನ್ವಯಿಸುವಂತೆ ಹೊರಡಿಸಲಾಗಿದೆ. ಆ ಪ್ರಕಾರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಕೂಡ ಮಂಡಲಿಯಲ್ಲಿ ಕೆಲಸ ಮಾಡುತ್ತಿರುವ ದಿನಕೂಲಿ ನೌಕರರಿಗೆ ವೇತನ ಶ್ರೇಣಿ ಮತ್ತು ಇತರ ಭತ್ಯೆಗಳನ್ನು ಕೊಡಲು ಕ್ರಮ ತೆಗೆದುಕೊಳ್ಳಬೇಕಾಗಿದ್ದು ಈ ಬಗ್ಗೆ ಪರಿಶೀಲಿಸಲು ಮಂಡಲಿಯು ಒಂದು ಉಪ ಸಮಿತಿಯನ್ನು ರಚಿಸಿತ್ತು. ಆ ಉಪ ಸಮಿತಿಯು ಈ ಕೆಳಗಿನಂತೆ ಶಿಫಾರಸ್ಸು ಮಾಡಿದೆ.

೧) ಮಂಡಲಿಯ ಅಧಿನಿಯಮದಲ್ಲಿ ಬರದೆ ಇರುವ ಹುದ್ದೆಗಳ ಪಟ್ಟಿ ಮಾಡಿ ಸರ್ಕಾರಕ್ಕೆ ಸೃಷ್ಟೀಕರಣ ಕೇಳುವುದು.